

# ಕನ್ನಡ ಸಾಹಿತ್ಯಗಣಿಯ ಅಸಲಿ ಚಿನ್ನದ ಗಟ್ಟಿ

ಜುಲೈ 22, 1938
ಫೆಬ್ರುವರಿ 19, 2024

**ತಮ್ಮ ಬರಹಗಳ ಮೂಲಕ ಓದುಗರನ್ನು ರಂಜಿಸಿದ ಕೆ.ಟಿ. ಗಟ್ಟಿ ಕನ್ನಡದ ಮುಖ್ಯ ಕಾದಂಬರಿಕಾರರಲ್ಲೊಬ್ಬರು. ಶಿಕ್ಷಣತಜ್ಞ, ಭಾಷಾತಜ್ಞರೂ ಹೌದು. ಅಗಲಿದ ಅನನ್ಯ ಚೇತನದ ಆರ್ದ್ರ ನೆನಪುಗಳು.**

**■ ಶ್ಯಾಮಲಾ ಮಾಧವ**

ಇಥಿಯೋಪಿಯಾದಿಂದ ತಾಯ್ನಾಡಿಗೆ ಮರಳಿದ ಲೇಖಕ ಕೆ.ಟಿ. ಗಟ್ಟಿ ಅವರ ವಿಳಾಸ, ಫೋಟೊವನ್ನು 'ಸುಧಾ' ಪತ್ರಿಕೆ ಅದೇ ತಾನೇ ಪ್ರಕಟಿಸಿತ್ತು. 'ಶಬ್ದ'ದಿಂದ ತೊಡಗಿ, 'ಕರ್ಮಣ್ಯೇ ವಾಧಿಕಾರಸ್ತೇ', 'ಸಾಫಲ್ಯ', 'ಅಬ್ರಾಹ್ಮಣ'ದಂತಹ ಧಾರಾವಾಹಿಗಳ ಮೂಲಕ ಓದುಗರನ್ನು ಉದ್ದೀಪಿಸಿದ ಕೃತಿಗಳ ಕರ್ತೃ ಅದುವರೆಗೆ ಓದುಗರಿಗೆ ಅಜ್ಞಾತರಾಗಿ ಉಳಿದಿದ್ದರು. ಅವರ ಕೃತಿಗಳಂತೆಯೇ ಬುದ್ಧಿಮತ್ತೆ ಕ್ರೋಡೀಕರಿಸಿದಂತಹ ಆ ಮುಖ ಆಗ ಥಟ್ಟನೆ ಓದುಗರೆದುರು ಪ್ರತ್ಯಕ್ಷವಾಗಿತ್ತು.

ಕೃತಿ–ಕರ್ತೃವನ್ನುದ್ದೇಶಿಸಿದ ಪ್ರಶ್ನೆಗಳೆಲ್ಲ ನನ್ನ ಡೈರಿಗಳಲ್ಲಿ ಅಡಗಿದ್ದುವು. ಆ ಎಲ್ಲ ಪ್ರಶ್ನೆಗಳೊಡನೆ ನನ್ನ ಪತ್ರ ಉಡುಪಿಯ ಅವರ ನಿವಾಸದತ್ತ ಹಾರಿತು. ಪತ್ರ ತಲುಪಿದ ಮರುದಿನವೇ ಗಟ್ಟಿಯವರು ಸೋಮೇಶ್ವರ ಉಚ್ಚಿಲದ ನಮ್ಮ ಮನೆ ಬಾಗಿಲಲ್ಲಿ ಪ್ರತ್ಯಕ್ಷರಾಗಿದ್ದರು. 'ಅವರ ಊರನ್ನು ಹಾಡಿ ಹೊಗಳಿ ಬರೆದಿದ್ದಾರೆ; ನಾನೂ ಇದೇ ಊರಿನವನು ಎಂದು ಅವರಿಗೆ ತಿಳಿದಿಲ್ಲ' ಎಂದು ನಮ್ಮ ತಂದೆಯವರೊಡನೆ ಅಂದರು. ತೂಗಿ ಆಡುವ ಮಿತಮಾತಿನ ಗಂಭೀರ ವ್ಯಕ್ತಿ, ನನ್ನೀ ಮೆಚ್ಚಿನ ಲೇಖಕ ಎಂದು ನಾನಂದೇ ಕಂಡುಕೊಂಡೆ.

ಅಂದಿನಿಂದ ಉಡುಪಿಯ ಕೊಯೆಲೋ ಕಾಂಪೌಂಡ್‌ನ ಅವರ ಬಾಡಿಗೆ ಮನೆ ಹಾಗೂ ಉಜಿರೆಯ 'ವನಶ್ರೀ' ಮತ್ತು ಮುಂಬೈಯ ನಮ್ಮ ಮನೆಯ ನಡುವೆ ಓಡಿಯಾಡಿದ ಪತ್ರಗಳು ಅಸಂಖ್ಯ. ಹಾಗೆ ಬಂದ ಪತ್ರಗಳೆಲ್ಲವೂ ನನ್ನ ಅನರ್ಘ್ಯ ನಿಧಿಯಾಗಿ ನನ್ನ ಪತ್ರಭಂಡಾರದಲ್ಲಿ ಉಳಿದಿವೆ.

ಸಾಹಿತ್ಯ, ಶಿಕ್ಷಣ, ವೈಚಾರಿಕತೆಯೇ ಉಸಿರಾಗಿ ಬಾಳಿದವರು ಗಟ್ಟಿಯವರು. ಮಾನವೀಯತೆಯೇ ಅವರ ಧರ್ಮವಾಗಿತ್ತು. 'ಸುಧಾ'ದಲ್ಲಿ ಧಾರಾವಾಹಿಯಾಗಿ ಹರಿದು ಬಂದ ಹದಿನಾಲ್ಕು ಕಾದಂಬರಿಗಳಂತೆಯೇ ಇತರ ಹಲವು ಮಹತ್ವಪೂರ್ಣ ಕೃತಿಗಳನ್ನು ರಚಿಸಿ ಓದುಗರ ಹೃದಯದಲ್ಲಿ ಶಾಶ್ವತವಾಗಿ ಉಳಿದವರು. ತಮ್ಮ ಕೃತಿಗಳಲ್ಲಿ ವೈಚಾರಿಕತೆಯ ದೀಪ್ತಿಯನ್ನು ಬೆಳಗಿದವರು. ಸ್ವಾಧ್ಯಾಯ ಹಾಗೂ ವ್ಯಾಪಕ ಓದು ಅವರನ್ನು ವಿಚಾರ ಶ್ರೀಮಂತನನ್ನಾಗಿಸಿತ್ತು. ಆರು ದಶಕಗಳಷ್ಟು ಕಾಲ ಅವರು ಓದುಗರನ್ನು ಹಿಡಿದಿಟ್ಟ ಪರಿ ಅಸಾಧಾರಣವಾದುದು.

ಬದುಕು ಎಂದರೆ ಬರಹವೇ ಆಗಿದ್ದ ಗಟ್ಟಿಯವರ ಸಾಹಿತ್ಯ ಕೃಷಿ, ಅವರ ಚಿಂತನಶೀಲ ಮನಸ್ಸಿನ ಪ್ರತಿಕೃತಿ. ಅನುಪಮ ಶಿಕ್ಷಣ ಪ್ರಜ್ಞೆ ಉಳ್ಳವರಾಗಿದ್ದ ಅವರ ಆತ್ಮಕಥೆ 'ತೀರ'ದ ಮುಖ್ಯ ವಿಚಾರಸೆಲೆಯೂ ಶಿಕ್ಷಣವೇ. ಸ್ವಶಿಕ್ಷಿತರಾಗಿ ಬೆಳೆದು ಬಂದ ಅವರ ಕೈ ಹಿಡಿದುದು ಪುಸ್ತಕಗಳು. ಯಕ್ಷಗಾನದ ಬೆನ್ನು ಹಿಡಿದು ಊರೂರು ಸುತ್ತುತ್ತಿದ್ದ ತಂದೆಯವರು ಹೊತ್ತು ತರುತ್ತಿದ್ದ ಪುಸ್ತಕಗಳು ಹಾಗೂ ತಾಯಿ ಹಾಡುತ್ತಿದ್ದ ಮಲೆಯಾಳಿ ಪಾಟ್ ಮತ್ತು ಪಾಡ್ದನಗಳು.

ಸಾಹಿತ್ಯದಂತೆಯೇ ಉಜಿರೆಯ ತಮ್ಮ 'ವನಶ್ರೀ'ಯಲ್ಲಿ